ಕುಮಾರ ಚಲವಾದಿ, ಹಾಸನ

*ಎಲ್ಲವನ್ನೂ ತ್ಯಜಿಸಿದ ಬಾಹುಬಲಿಗೆ ಮಹಾಮಸ್ತಕಾಭಿಷೇಕ ಏಕೆ ಬೇಕು?*



'ತಲೆಗೆ ಮೋಹ ಏರದಂತೆ ಆಗಾಗ್ಗೆ ತಲೆ ತೊಳೆದುಕೊಳ್ಳಬೇಕು' ಎಂದು ಭಕ್ತನಿಗೆ ಸಾಂಕೇತಿಕವಾಗಿ ಸೂಚಿಸಲು.

ಫಾಲನೇತ್ರ ಸಜ್ಜನ, ಶಿರಸಿ

*ಪುಷ್ಪಕವಿಮಾನ ಕಾಲದ ಶೂರ್ಪನಖಿಗೆ ತನ್ನ ಕೊಯ್ದ ಕಿವಿಮೂಗುಗಳನ್ನು ಪ್ಲಾಸ್ಟಿಕ್ ಸರ್ಜರಿಯಿಂದ ಸರಿಪಡಿಸಿಕೊಳ್ಳಲು ಆಗಲಿಲ್ಲವೇಕೆ?*

ಅವಳು ಒಮ್ಮೆ ಮನುಜಳಂತೆ, ಒಮ್ಮೆ ರಕ್ಕಸಿಯಂತೆ ಇದ್ದುದರಿಂದ ಕಿವಿಮೂಗುಗಳ ಸರಿಯಾದ ಮೌಲ್ಡ್ ದೊರೆಯಲಿಲ್ಲವಂತೆ.

ಅಮ್ಮವನ ವಸುಂಧರಾ ಲಕ್ಷ್ಮಣ, ಕುಶಾಲನಗರ

*ದಡ್ಡರಿಗೆ ದೊಣ್ಣೆ ಪೆಟ್ಟು; ಭಂಡರಿಗೆ?*

ರಾಜಕೀಯ ಪಕ್ಷಗಳಿಂದ ರೆಡ್ ಕಾರ್ಪೆಟ್ಟು.

ಜೆ. ಜಯಣ್ಣ, ದಾವಣಗೆರೆ

*ಆಂಬುಲೆನ್ಸ್‌ಗೆ ನಂಬರ್ 108 ಕೊಡಲು ಕಾರಣ?*



1+8=9. ನವದ್ವಾರಗಳೂ ಬಂದ್ ಆಗಿ ಮನುಜ ಸೊನ್ನೆ ಆಗುವುದು ತಪ್ಪಬೇಕೆ? ಕರೆಯಿರಿ 108!

ಎಚ್.ಜಿ. ಜಗದೀಶ್, ಮೈಸೂರು

*ಜಿರಳೆ, ಇಲಿ, ಬೆಕ್ಕುಗಳಿಗೂ ಮೀಸೆ ಇರುವಾಗ ಅದು ಪೌರುಷದ ಸಂಗತಿ ಹೇಗೆ?*

ಆ ಮೂರೂ ಎದುರು ಬಂದು ರಮಣಿಯರು ಕಿರ್‌ರ್‌ರ್ ಎಂದು ಕಿರುಚುವಂತೆ ಮಾಡುವುದು ಪೌರುಷವಲ್ಲದೆ ಮತ್ತೇನು!

ಎಚ್.ಆರ್. ದೇಸಾಯಿ, ರಾಯಚೂರು

*ಮುಂದಿನ ಪೀಳಿಗೆ ನಮ್ಮನ್ನು ನೆನಪಿಸಿಕೊಳ್ಳಬೇಕಾದರೆ ಇಂದು ನಾವು ಏನು ಮಾಡಬೇಕು?*

ಹಿಂದಿನ ಪೀಳಿಗೆ ನಮಗಿತ್ತದ್ದಕ್ಕಿಂತ ಸುಂದರ ಸಮಾಜವನ್ನು ಕಟ್ಟಿ ಬಿಟ್ಟುಕೊಡಬೇಕು.

ಎಂ.ಎಸ್, ಗುರುರಾಜಾಚಾರು, ಬಳ್ಳಾರಿ

*ಹೆಣ್ಣಿಗೆ ನಾಲಿಗೆಯೇ ಇಲ್ಲದಿದ್ದರೆ?*

ವ್ಯತ್ಯಾಸವೇನಾಗದು. ಗಂಡನ್ನು ಹತೋಟಿಯಲ್ಲಿಡಲು ಏರಿದ ಒಂದೇ ಹುಬ್ಬು ಸಾಕು.

ಕೆ.ಎಂ. ವಿಭೂತಿ, ಹರಿಹರ

*ಗುರುವಿನ ಗುಲಾಮನಿಗೂ, ಹೆಂಡತಿಯ ಗುಲಾಮನಿಗೂ ಅಂತರವೇನು ಗುರುವೆ?*

ಅದು ಮುಕ್ತಿಗೆ ದಾರಿ; ಇದು ಭುಕ್ತಿಗೆ ದಾರಿ.

ಎಂ.ಎ. ಕುಮಾರ್, ಬೆಂಗಳೂರು

*ಬಣ್ಣಬಣ್ಣದ ಹೂವಿಗೂ, ಬಣ್ಣಬಣ್ಣದ ಹುಡುಗಿಯರಿಗೂ ಏನು ವ್ಯತ್ಯಾಸ?*

ಹೂ ಬಳ್ಳಿಯಲ್ಲಿದ್ದರೆ ಚೆನ್ನ; ಹುಡುಗಿ ಬಳಿಯಲ್ಲಿದ್ದರೆ ಚೆನ್ನ.

ಮುರಲೀಧರ ಕುಲಕರ್ಣಿ, ಬೀದರ

*ನಾರಿ ಮುನಿದರೆ ಮಾರಿ. ಒಲಿದರೆ?*

ರಸಮಯ ಘಳಿಗೆಗಳಿಗೆ ದಾರಿ.

ನರಸಿಂಹ ಪೈ, ಕಾಸರಕೋಡ

*ಮಾನವನಿಗೆ ಸಾವೇ ಬಾರದಿದ್ದರೆ...?*

ಚಿಂತೆ ಬೇಡ. ಹತ್ತಿರದ ಕುಖ್ಯಾತ ಆಸ್ಪತ್ರೆಗೆ ಸೇರಿಸಿ ಶೀಘ್ರ ಫಲ ಪಡೆಯಿರಿ.

ಆರ್.ಎಸ್. ಲಕ್ಷ್ಮೀಕಾಂತ್, ಬೆಂಗಳೂರು

*ಇತ್ತೀಚೆಗೆ ಕೆಲವು ಪತ್ನಿಯರು ಅವರ ಗಂಡಂದಿರನ್ನು ಹೆಸರು ಹಿಡಿದು ಕರೆಯುತ್ತಾರಲ್ಲ, ಇದು ಸರಿಯೆ?*

'ಬಾರ್ಲಾ ಮೂದೇವಿ...' ಎನ್ನುವುದಕ್ಕಿಂತ ಮೇಲಲ್ಲವೆ!

ಪಿ. ಜಯವಂತ ಪೈ, ಕುಂದಾಪುರ

*ದೇವಸ್ಥಾನದಲ್ಲಿ ಭಜನೆ ಇದ್ದರೆ ಹತ್ತಾರು ಜನ, ಭೋಜನ ಇದ್ದರೆ ನೂರಾರು ಜನ ಸೇರುತ್ತಾರಲ್ಲಾ...?*

ತಿಳಿಯಿತು; ಜನ ಕೈ ತಾಳಕ್ಕಿಂತ ಹೊಟ್ಟೆ ತಾಳಕ್ಕೆ ಹೆಚ್ಚು ಗಮನ ಕೊಡುತ್ತಾರೆ!

## ಬಹುಮಾನಿತ ಪ್ರಶ್ನೆ

ಬಿ.ಎಲ್. ಸೀತಾರಾಮಾಚಾರಿ, ದಾವಣಗೆರೆ

*ಕಾಡು, ಸುಡುಗಾಡು; ಇವುಗಳ ವ್ಯತ್ಯಾಸವೇನು ರಾಂಜಿ?*

ಪ್ರಾಣಿ, ಪಕ್ಷಿ ಹೋಗಿ ಇರಲು ಕಾಡು; ಪ್ರಾಣಪಕ್ಷಿ ಹೋಗಿರಲು, ಸುಡುಗಾಡು.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

*ಪರಿಸರಪ್ರೇಮಿ, ಪ್ರಾಣಿಪ್ರೇಮಿ, ಪುಸ್ತಕಪ್ರೇಮಿ, ಇವರುಗಳ ಪೈಕಿ ನಿಮಗೆ ಯಾರು ತುಂಬಾ ಇಷ್ಟ?*

ಸಾಕುವ ವಿಧಾನಕ್ಕಾಗಿ ಪುಸ್ತಕ ಓದಿ, ಪೋಷಣೆಗೆ ತಕ್ಕ ಪರಿಸರ ನಿರ್ಮಿಸುವ ಪ್ರಾಣಿಪ್ರೇಮಿಯೇ.

ಸುಜ್ಞಾನಾಚಾರ್ಯ, ಕಲಿಕೆರೆ

*ನಾನು ಮನಸ್ಸು ಮಾಡಿದರೆ ಸ್ವರ್ಗಕ್ಕೇ ಹೋಗಬಲ್ಲೆ. ಆದರೆ..... ದಾರಿ ಗೊತ್ತಿಲ್ಲವಲ್ಲಾ ಸಾರ್?*



ಜಿಪಿಎಸ್ (ಜಿ – ಗುಡ್‌ನೆಸ್; ಪಿ – ಪ್ರ್ಯಾರಿಟಿ; ಎಸ್ – ಸರ್ವಿಸ್) ಪ್ರಯತ್ನಿಸಿ; ದಾರಿ ಕಂಡೀತು.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಮಾತೆಂಬುದು ಜ್ಯೋತಿರ್ಲಿಂಗ ಎನ್ನುವುದು ಕೆಲವು ಸ್ವಾಮೀಜಿಗಳಿಗೆ ಮರೆತುಹೋಗಿದೆಯಲ್ಲ ಹೇ ರಾಂ?*

ಮರೆತಿಲ್ಲ; ತಿಳಿದೇ ಇಲ್ಲವಂತೆ; ಬತ್ತಿಯ ಬೆಳಕಿಗೇ ತೃಪ್ತರಾದವರಿಗೆ ಭಕ್ತಿಯ ಬೆಳಕು ಕಾಣದಂತೆ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

*ಹೆಣ್ಣು ತೋರಿಸುವ ಶಾಸ್ತ್ರ ಈಗಲೂ ಪ್ರಚಲಿತವಾಗಿದೆ. ಗಂಡು ತೋರಿಸುವ ಶಾಸ್ತ್ರ ಯಾವಾಗ ಬರುತ್ತದೆ?*

ಈಗಲೇ ಇದೆಯಲ್ಲ! ಹೆಣ್ಣು ಕೈಕೊಟ್ಟಾಗಲೆಲ್ಲ ಗಂಡನ್ನು ತೋರಿಸುತ್ತಾರೆ – ಮೆಂಟಲ್ ಆಸ್ಪತ್ರೆಯ ಡಾಕ್ಟರಿಗೆ.

■ ರಾಮ್